ಆ) ಹಾಗಿದ್ದಲ್ಲಿ, ಸ್ಥಗಿತಗೊಂಡಿರುವ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? ಪೂರ್ಣ ಮಾಹಿತಿ ನೀಡುವುದು;

ಇ) ಅಪೂರ್ಣಗೊಂಡಿರುವ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲು ಇನ್ನೂ ಸುಮಾರು 2.00 ಕೋಟಿ ರೂ.ಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸದರಿ ಅನುದಾನವನ್ನು ಪ್ರಸಕ್ತಸಾಲಿನಲ್ಲಿಯೇ ಮಂಜೂರು ಮಾಡಲಾಗುವುದೇ; ಪೂರ್ಣ ವಿವರ ನೀಡುವುದು.

ಶ್ರೀ ಡಿ. ಸುಧಾಕರ (ಸಮಾಜ ಕಲ್ಯಾಣ ಸಚಿವರು):–

ಅ) ಹೌದು

ಆ) ಸಂಬಂಧದ ಪ್ರಸ್ತಾವನೆ ಪರಿಶೀಲಿಸಿ ಇತ್ತೀಚೆಗೆ ಸರ್ಕಾರಿ ಆದೇಶ ಸಂಖ್ಯೆ: 344 ಪಕವಿ 2009 ದಿನಾಂಕ 29–06–2010 ರಲ್ಲಿ ರೂ. 200.00 ಲಕ್ಷಗಳ ಮೊತ್ತದ ಅನುದಾನ ಬಿಡುಗಡೆ ಮಾಡಲಾಗಿದೆ.

ಚಿಕ್ಕಬಳ್ಳಾಪುರದಲ್ಲಿರುವ ಬಿ.ಸಿ.ಎಂ. ವಸತಿ ನಿಲಯಗಳು

502 (624) ಶ್ರೀ ಬಚ್ಚೇಗೌಡ ಕೆ.ಪಿ. (ಚಿಕ್ಕಬಳ್ಳಾಪುರ):– ಸಮಾಜ ಕಲ್ಯಾಣ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ ಬಿಸಿಎಂ ವಸತಿ ನಿಲಯಗಳ ಸಂಖ್ಯೆ: ಎಷ್ಟು (ವಿವರಗಳನ್ನು ನೀಡುವುದು)

ಆ) ಈ ವಸತಿ ನಿಲಯಗಳಿಗೆ ಸ್ವಂತ ಕಟ್ಟಡಗಳಿವೆಯೇ; ಬಾಡಿಗೆ ಕಟ್ಟಡದಲ್ಲಿರುವ ವಸತಿನಿಲಯಗಳಾವುವು;

ಇ) ಹಾಗಿದ್ದಲ್ಲಿ, ಪ್ರತಿ ತಿಂಗಳು ಈ ಕಟ್ಟಡಗಳಿಗೆ ನೀಡುತ್ತಿರುವ ಬಾಡಿಗೆ ಮೊತ್ತವೆಷ್ಟು; ವಸತಿ ನಿಲಯಗಳವಾರು ವಿವರಗಳನ್ನು ನೀಡುವುದು;

ಈ) ಬಿಸಿಎಂ ವಸತಿ ನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಉ) ಹಾಗಿದ್ದಲ್ಲಿ, ಕಟ್ಟಡ ನಿರ್ಮಾಣಕ್ಕೆ ಸ್ಥಳ ಗುರುತಿಸಿ ಅಂದಾಜು ಪಟ್ಟಿ ತಯರಿಸಲಾಗಿದೆಯೇ;

ಊ) ಹಾಗಿದ್ದಲ್ಲಿ, ಈ ಕಟ್ಟಡಗಳ ನಿರ್ಮಾಣಕ್ಕೆ ಸರ್ಕಾರ ನಿಗಧಿಪಡಿಸಿರುವ ಅನುದಾನದ ಮೊತ್ತವೆಷ್ಟು (ವಿವರಗಳನ್ನು ನೀಡುವುದು);

ಋ) ಹಾಗಿದ್ದಲ್ಲಿ, ಕಟ್ಟಡ ನಿರ್ಮಾಣದ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಡಿ. ಸುಧಾಕರ (ಸಮಾಜ ಕಲ್ಯಾಣ ಸಚಿವರು):–

ಅ) 35 ಮೆಟ್ರಿಕ್–ಪೂರ್ವ ಹಾಗೂ 8 ಮೆಟ್ರಿಕ್–ನಂತರ ಒಟ್ಟು 43 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. (ವಿವರ ಅನುಬಂಧ–1ರಲ್ಲಿ ಲಗತ್ತಿಸಿದೆ)

ಆ) ಈ ವಿದ್ಯಾರ್ಥಿನಿಲಯಗಳಲ್ಲಿ 23 ಸ್ವಂತ ಕಟ್ಟಡಗಳಲ್ಲಿವೆ, 1 ಉಚಿತ ಕಟ್ಟಡ ಹಾಗೂ 19 ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. (ವಿವರ ಅನುಬಂಧ–1ರಲ್ಲಿ ಲಗತ್ತಿಸಿದೆ)

ಇ) ತಿಂಗಳಿಗೆ ಒಟ್ಟು ರೂ. 1,18,527.00 (ವಿವರ ಅನುಬಂಧ–2ರಲ್ಲಿ ಲಗತ್ತಿಸಿದೆ)

ಈ) ಹೌದು, ಇದರಲ್ಲಿ 5 ಕಟ್ಟಡಗಳು ನಿರ್ಮಾಣ ಹಂತದಲ್ಲಿರುತ್ತವೆ.

ಉ) 2 ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ ನಿವೇಶನಗಳು ಲಭ್ಯವಿರುತ್ತವೆ. ಅಂದಾಜು ಪಟ್ಟಿಯನ್ನು ತಯಾರಿಸಲಾಗುವುದು.

ಊ) ಚಿಕ್ಕಬಳ್ಳಾಪುರ ಜಿಲ್ಲೆಯ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕೆ ಪ್ರತ್ಯೇಕವಾಗಿ ಹಣ ನಿಗಧಿಪಡಿಸಿರುವುದಿಲ್ಲ. 2010–11ನೇ ಸಾಲಿಗೆ ವಿವಿಧ ಕಾರ್ಯಕ್ರಮಗಳಡಿಯಲ್ಲಿ ವಿದ್ಯಾರ್ಥಿನಿಲಯಗಳ ಕಟ್ಟಡಗಳ ನಿರ್ಮಾಣಕ್ಕೆ ರೂ. 8127.00 ಲಕ್ಷ ಹಣ ಒದಗಿಸಲಾಗಿದೆ.

ಋ) ಮಂಜೂರಾತಿ ನಂತರ ಕ್ರಮ ಕೈಗೊಳ್ಳಲಾಗುವುದು

ಅನುಬಂಧ–1

ಮೆಟ್ರಿಕ್–ಪೂರ್ವ ವಿದ್ಯಾರ್ಥಿನಿಲಯಗಳು				
ಕ್ರ. ಸಂ.	ವಿದ್ಯಾರ್ಥಿನಿಲಯದ ಸ್ಥಳ	ಬಾಲಕ/ಬಾಲಕಿ	ಮಂಜೂರಾತಿ ಸಂಖ್ಯೆ	ಕಟ್ಟಡದ ವಿವರ
1. ಚಿಕ್ಕಬಳ್ಳಾಪುರ				
1	ಚಿಕ್ಕಬಳ್ಳಾಪುರ	ಬಾಲಕ	50	ಸ್ವಂತ
2	ಚಿಕ್ಕಬಳ್ಳಾಪುರ	ಬಾಲಕಿ	50	ಬಾಡಿಗೆ
2. ಚಿಂತಾಮಣಿ ತಾಲ್ಲೂಕು				
3	ಚಿಂತಾಮಣಿ	ಬಾಲಕಿ	50	ಸ್ವಂತ
4	ಬಟ್ಲಳ್ಳಿ	ಬಾಲಕ	50	ಸ್ವಂತ
5	ಬರುಡಗುಂಟೆ	ಬಾಲಕ	50	ಸ್ವಂತ
6	ಚಿಂತಾಮಣಿ (ಒಬಿಸಿ)	ಬಾಲಕ	80	ಬಾಡಿಗೆ
7	ಚಿಲಕಲನೇರ್ಪು	ಬಾಲಕ	75	ಸ್ವಂತ
8	ಯಗವಕೋಟೆ	ಬಾಲಕ	50	ಬಾಡಿಗೆ
9	ಟಿ. ಗೊಲ್ಲರಹಳ್ಳಿ	ಬಾಲಕ	50	ಸ್ವಂತ
10	ಕೆಂಚಾರ್ಲಹಳ್ಳಿ	ಬಾಲಕ	50	ಬಾಡಿಗೆ
11	ಹಿರೇಕಟ್ಟಿಗೇನಹಳ್ಳಿ	ಬಾಲಕ	50	ಉಚಿತ
3. ಗೌರಿಬಿದನೂರು ತಾಲ್ಲೂಕು				
12	ಗೌರಿಬಿದನೂರು	ಬಾಲಕ	50	ಬಾಡಿಗೆ
13	ಗೌರಿಬಿದನೂರು	ಬಾಲಕಿ	50	ಬಾಡಿಗೆ

14	ವಾಟದಹೊಸಹಳ್ಳಿ	ಬಾಲಕ	50	ಸ್ವಂತ
15	ಡಿ. ಪಾಳ್ಯ	ಬಾಲಕ	50	ಸ್ವಂತ
16	ಹೊಸೂರು	ಬಾಲಕ	50	ಸ್ವಂತ
17	ತೊಂಡೆಬಾವಿ	ಬಾಲಕ	50	ಬಾಡಿಗೆ
18	ಹೆಚ್. ನಾಗಸಂದ್ರ	ಬಾಲಕ	50	ಸ್ವಂತ
4.	**ಗುಡಿಬಂಡೆ ತಾಲ್ಲೂಕು**			
19	ಗುಡಿಬಂಡೆ	ಬಾಲಕ	100	ಸ್ವಂತ
20	ಗುಡಿಬಂಡೆ	ಬಾಲಕಿ	50	ಬಾಡಿಗೆ
21	ಸೋಮೇನಹಳ್ಳಿ	ಬಾಲಕ	50	ಸ್ವಂತ
5.	**ಶಿಡ್ಲಘಟ್ಟ ತಾಲ್ಲೂಕು**			
22	ಶಿಡ್ಲಘಟ್ಟ	ಬಾಲಕ	50	ಸ್ವಂತ
23	ಶಿಡ್ಲಘಟ್ಟ ಟೌನ್	ಬಾಲಕಿ	50	ಬಾಡಿಗೆ
24	ಕುಂದಲಗುರ್ಕಿ	ಬಾಲಕ	50	ಸ್ವಂತ
25	ಮೇಲೂರು	ಬಾಲಕ	50	ಸ್ವಂತ
26	ಡಿಬ್ಬೂರಳ್ಳಿ	ಬಾಲಕ	50	ಸ್ವಂತ
27	ದೊಡ್ಡತೇಕಳ್ಳಿ	ಬಾಲಕ	50	ಬಾಡಿಗೆ
6.	**ಬಾಗೇಪಲ್ಲಿ ತಾಲ್ಲೂಕು**			
28	ಬಾಗೇಪಲ್ಲಿ	ಬಾಲಕ	55	ಸ್ವಂತ
29	ಬಾಗೇಪಲ್ಲಿ	ಬಾಲಕಿ	50	ಬಾಡಿಗೆ
30	ಪಾತಪಾಳ್ಯ	ಬಾಲಕ	50	ಸ್ವಂತ
31	ಗೂಳೂರು	ಬಾಲಕ	50	ಸ್ವಂತ
32	ಮಿಟ್ಟೆಮರಿ	ಬಾಲಕ	50	ಸ್ವಂತ
33	ಚಾಕವೇಲು	ಬಾಲಕ	50	ಸ್ವಂತ
34	ಜೂಲಪಾಳ್ಯ	ಬಾಲಕ	50	ಸ್ವಂತ
35	ಬೆಳ್ಳೂರು	ಬಾಲಕ	50	ಬಾಡಿಗೆ
			ಒಟ್ಟು 1870	

ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳು				
ಕ್ರ. ಸಂ.	ವಿದ್ಯಾರ್ಥಿನಿಲಯದ ಸ್ಥಳ	ಬಾಲಕ/ಬಾಲಕಿ	ಮಂಜೂರಾತಿ ಸಂಖ್ಯೆ	ಕಟ್ಟಡದ ವಿವರ
1. ಚಿಕ್ಕಬಳ್ಳಾಪುರ ತಾಲ್ಲೂಕು				
1	ಚಿಕ್ಕಬಳ್ಳಾಪುರ	ಬಾಲಕಿ	150	ಬಾಡಿಗೆ
2. ಚಿಂತಾಮಣಿ ತಾಲ್ಲೂಕು				
2	ಚಿಂತಾಮಣಿ	ಬಾಲಕ	248	ಬಾಡಿಗೆ
3	ಚಿಂತಾಮಣಿ ಟೌನ್	ಬಾಲಕಿ	150	ಬಾಡಿಗೆ
3. ಬಾಗೇಪಲ್ಲಿ ತಾಲ್ಲೂಕು				
4	ಬಾಗೇಪಲ್ಲಿ	ಬಾಲಕ	90	ಸ್ವಂತ
5	ಬಾಗೇಪಲ್ಲಿ	ಬಾಲಕಿ	150	ಬಾಡಿಗೆ
4. ಗೌರಿಬಿದನೂರು ತಾಲ್ಲೂಕು				
6	ಗೌರಿಬಿದನೂರು ಟೌನ್	ಬಾಲಕಿ	150	ಬಾಡಿಗೆ
5. ಶಿಡ್ಲಘಟ್ಟ ತಾಲ್ಲೂಕು				
7	ಶಿಡ್ಲಘಟ್ಟ ಟೌನ್	ಬಾಲಕಿ	100	ಬಾಡಿಗೆ
6. ಗುಡಿಬಂಡೆ ತಾಲ್ಲೂಕು				
8	ಗುಡಿಬಂಡೆ ಟೌನ್	ಬಾಲಕಿ	100	ಬಾಡಿಗೆ
			ಒಟ್ಟು 1138	

ಅನುಬಂಧ–2

ಕ್ರ. ಸಂ.	ತಾಲ್ಲೂಕು	ವಿದ್ಯಾರ್ಥಿನಿಲಯದ ಹೆಸರು	ಮಾಹೆಯಾನ ಪಾವತಿಸುತ್ತಿರುವ ಮೊತ್ತ
1	ಚಿಕ್ಕಬಳ್ಳಾಪುರ	ಮೆ.ನಂ. ಬಾಲಕಿಯರ ವಿ.ನಿ. ಚಿಕ್ಕಬಳ್ಳಾಪುರ ಟೌನ್	18100
2	"	ಮೆ.ಪೂ. ಬಾಲಕಿಯರ ವಿ.ನಿ.	13200

		ಚಿಕ್ಕಬಳ್ಳಾಪುರ ಟೌನ್	
3	ಗೌರಿಬಿದನೂರು	ಮೆ. ಪೂ. ಬಾಲಕರ ವಿ.ನಿ. ವಿದುರಾಶ್ವಥ	5490
4	,,	ಮೆ.ಪೂ. ಬಾಲಕಿಯರ ವಿ.ನಿ. ಗೌರಿಬಿದನೂರು	8200
5	,,	ಮೆ. ಪೂ. ಬಾಲಕಿಯರ ವಿ.ನಿ. ಗೌರಿಬಿದನೂರು	8550
6	,,	ಮೆ.ನಂ. ಬಾಲಕಿಯರ ವಿ.ನಿ. ಗೌರಿಬಿದನೂರು ಟೌನ್	16700
7	ಚಿಂತಾಮಣಿ	ಮೆ.ನಂ. ಬಾಲಕಿಯರ ವಿ.ನಿ. ಚಿಂತಾಮಣಿ ಟೌನ್	8200
8	,,	ಮೆ. ನಂ. ಬಾಲಕರ ವಿ.ನಿ. ಚಿಂತಾಮಣಿ ಟೌನ್	16200
9	,,	ಮೆ.ಪೂ. ಬಾಲಕರ ವಿ.ನಿ. ಚಿಂತಾಮಣಿ ಟೌನ್	5207
10	,,	ಮೆ.ಪೂ. ಬಾಲಕರ ವಿ.ನಿ. ಯಗವಕೋಟೆ	1200
11	,,	ಮೆ.ಪೂ. ಬಾಲಕರ ವಿ.ನಿ. ಕೆಂಚಾರ್ಲಹಳ್ಳಿ	1800
12	ಶಿಡ್ಲಘಟ್ಟ	ಮೆ.ಪೂ. ಬಾಲಕಿಯರ ವಿ.ನಿ. ಶಿಡ್ಲಘಟ್ಟ ಟೌನ್	3600
13	,,	ಮೆ.ಪೂ. ಬಾಲಕಿಯರ ವಿ.ನಿ. ಶಿಡ್ಲಘಟ್ಟ ಟೌನ್	3600
14	,,	ಮೆ.ನಂ. ಬಾಲಕಿಯರ ವಿ.ನಿ. ಶಿಡ್ಲಘಟ್ಟ ಟೌನ್	7900
15	ಗುಡಿಬಂಡೆ	ಮೆ.ನಂ. ಬಾಲಕಿಯರ ವಿ.ನಿ. ಗುಡಿಬಂಡೆ ಟೌನ್	–
16	,,	ಮೆ.ಪೂ. ಬಾಲಕಿಯರ ವಿ.ನಿ. ಗುಡಿಬಂಡೆ ಟೌನ್	–

17	ಬಾಗೇಪಲ್ಲಿ	ಮೆ.ನಂ. ಬಾಲಕಿಯರ ವಿ.ನಿ. ಬಾಗೇಪಲ್ಲಿ ಟೌನ್	–
18	,,	ಮೆ.ಪೂ. ಬಾಲಕಿಯರ ವಿ.ನಿ.. ಬಾಗೇಪಲ್ಲಿ ಟೌನ್	–
19	,,	ಮೆ.ಪೂ. ಬಾಲಕರ ವಿ.ನಿ.. ಬಿಳ್ಳೂರು	2980
		ಒಟ್ಟು	**118527**

ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ಬಿಡುಗಡೆ ಮಾಡುವುದು

503 (625) ಶ್ರೀ ಬಚ್ಚೇಗೌಡ ಕೆ.ಪಿ. (ಚಿಕ್ಕಬಳ್ಳಾಪುರ):– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಚಿಕ್ಕಬಳ್ಳಾಪುರ ವಿಧಾನಸಭ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಲ್ಲಿ ಭಾಗ್ಯಲಕ್ಷ್ಮಿ ಯೋಜನೆಯಲ್ಲಿ ಬಾಂಡ್‌ಗಳಿಗಾಗಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು;

ಆ) ಈ ಮೂರು ವರ್ಷಗಳಲ್ಲಿ ಮಂಜೂರಾಗಿರುವ ಅರ್ಜಿಗಳೆಷ್ಟು ಮತ್ತು ಮಂಜೂರಾಗದೆ ಉಳಿದಿರುವ ಅರ್ಜಿಗಳೆಷ್ಟು;

ಇ) ಈ ಅರ್ಜಿಗಳು ಮಂಜೂರಾಗದೆ ಉಳಿಯಲು ಕಾರಣಗಳೇನು;

ಈ) ಹಾಗಿದ್ದಲ್ಲಿ, ಉಳಿದಿರುವ ಭಾಗ್ಯಲಕ್ಷ್ಮಿ ಬಾಂಡ್‌ಗಳನ್ನು ಯಾವಾಗ ವಿತರಿಸಲಾಗುವುದು?

ಶ್ರೀ ಪಿ. ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):–